**All India Radio: Bangalore**
**National Bulletin In Kannada**
**16.12.2025 19.35 p.m.**
ಆಕಾಶವಾಣಿ, ಬೆಂಗಳೂರು
ರಾಷ್ಟ್ರೀಯ ವಾರ್ತೆಗಳು
**16.12.2025 19.35 p.m.**
***************

**ಮುಖ್ಯಾಂಶಗಳು**

೧.ಮುಂದಿನ ೫ ವರ್ಷಗಳಲ್ಲಿ ಜೋರ್ಡಾನ್ ಜೊತೆ ೫ ಶತಕೋಟಿ ಡಾಲರ್ ದ್ವಿಪಕ್ಷೀಯ ವ್ಯಾಪಾರಕ್ಕೆ ಪ್ರಧಾನಿ ನರೇಂದ್ರ ಮೋದಿ ಪ್ರಸ್ತಾಪ

೨.ಆಧ್ಯಾತ್ಮಿಕ ಸಂಸ್ಥೆಗಳು ಮಾನವೀಯತೆ, ಒಗ್ಗೂಡಿಸುವಿಕೆಯ ಕೆಲಸ ಮಾಡುತ್ತಿವೆ - ರಾಷ್ಟ್ರಪತಿ ದ್ರೌಪದಿ ಮುರ್ಮು

೩.ವಿಜಯ್ ದಿವಸ್ ; ರಾಷ್ಟ್ರಪತಿ ಭವನದಲ್ಲಿ ಪರಮ ವೀರ ಚಕ್ರ ಗ್ಯಾಲರಿ ಉದ್ಘಾಟನೆ

೪.೧೯ ವರ್ಷದೊಳಗಿನ ಏಷ್ಯಾ ಕಪ್ ಏಕದಿನ ಕ್ರಿಕೆಟ್; ಮಲೇಷ್ಯಾ ವಿರುದ್ಧ ಭಾರತಕ್ಕೆ ೩೧೫ ರನ್‌ಗಳ ಗೆಲುವು

***************

ಪ್ರಧಾನಿ ನರೇಂದ್ರ ಮೋದಿ ಅವರು ಇಂದು ಜೋರ್ಡಾನ್‌ಗೆ ತಮ್ಮ ಎರಡು ದಿನಗಳ ಭೇಟಿಯನ್ನು ರಾಜ ೨ನೇ ಅಬ್ದುಲ್ಲಾ ಅವರೊಂದಿಗೆ ವಿಸ್ತೃತ ಮಾತುಕತೆ ನಡೆಸಿ, ಎರಡೂ ರಾಷ್ಟ್ರಗಳ ಕೈಗಾರಿಕಾ ನಾಯಕರ ನಿಯೋಗದ ಉನ್ನತ ಮಟ್ಟದ ವ್ಯಾಪಾರ ವೇದಿಕೆಯನ್ನುದ್ದೇಶಿಸಿ ಮಾತನಾಡಿದರು. ಜೋರ್ಡಾನ್ ಜೊತೆ ಭಾರತದ ಮೊದಲ

ಪೂರ್ಣ ದ್ವಿಪಕ್ಷೀಯ ನಿರ್ಧಾರಗಳನ್ನು ಗುರುತಿಸುವ ಮತ್ತು ಎರಡೂ ದೇಶಗಳು ರಾಜತಾಂತ್ರಿಕ ಸಂಬಂಧಗಳ ೭೫ ವರ್ಷಗಳನ್ನು ಆಚರಿಸಲು ಸಿದ್ಧತೆ ನಡೆಸುತ್ತಿರುವ ಈ ಭೇಟಿಯಲ್ಲಿ, ಬಹು ಒಪ್ಪಂದಗಳು ಮತ್ತು ವರ್ಧಿತ ಆರ್ಥಿಕ ಸಹಕಾರಕ್ಕಾಗಿ ಹಂಚಿಕೆಯ ದೃಷ್ಟಿಕೋನವನ್ನು ಅಂತಿಮಗೊಳಿಸಲಾಯಿತು. ಪ್ರಧಾನಿ ಮೋದಿ ಮತ್ತು ರಾಜ ೨ನೇ ಅಬ್ದುಲ್ಲಾ ಜಂಟಿಯಾಗಿ ಇಂದು ಅಮ್ಮಾನ್‌ನಲ್ಲಿ ನಡೆದ ಭಾರತ-ಜೋರ್ಡಾನ್ ವ್ಯಾಪಾರ ವೇದಿಕೆಯನ್ನು ಉದ್ದೇಶಿಸಿ ಮಾತನಾಡಿದರು, ಇದರಲ್ಲಿ ಕ್ರೌನ್ ಪ್ರಿನ್ಸ್ ಹುಸೇನ್ ಮತ್ತು ಜೋರ್ಡಾನ್‌ನ ವ್ಯಾಪಾರ ಮತ್ತು ಕೈಗಾರಿಕಾ ಸಚಿವರು ಮತ್ತು ಹೂಡಿಕೆ ಸಚಿವರು ಭಾಗವಹಿಸಿದ್ದರು. ವೇದಿಕೆಯನ್ನು ಉದ್ದೇಶಿಸಿ ಮಾತನಾಡಿದ ಪ್ರಧಾನಿ ಮೋದಿ, ಮುಂದಿನ ಐದು ವರ್ಷಗಳಲ್ಲಿ ಜೋರ್ಡಾನ್ ಜೊತೆಗಿನ ದ್ವಿಪಕ್ಷೀಯ ವ್ಯಾಪಾರವನ್ನು ೫ ಶತಕೋಟಿ ಡಾಲರ್‌ಗಳಿಗೆ ದ್ವಿಗುಣಗೊಳಿಸುವ ಪ್ರಸ್ತಾಪವನ್ನು ಮಂಡಿಸಿದರು. ಡಿಜಿಟಲ್ ಸಾರ್ವಜನಿಕ ಮೂಲಸೌಕರ್ಯ, ಮಾಹಿತಿ ತಂತ್ರಜ್ಞಾನ, ಫಿನ್‌ಟೆಕ್, ಆರೋಗ್ಯ-ತಂತ್ರಜ್ಞಾನ ಮತ್ತು ಕೃಷಿ-ತಂತ್ರಜ್ಞಾನದಲ್ಲಿ ವ್ಯಾಪಾರ ಸಹಯೋಗದ ಅವಕಾಶಗಳನ್ನು ಉಲ್ಲೇಖಿಸಿದ ಪ್ರಧಾನಿ, ಎರಡೂ ರಾಷ್ಟ್ರಗಳ ಸ್ಟಾರ್ಟ್‌ಅಪ್‌ಗಳನ್ನು ಸಹಕರಿಸಲು ಆಹ್ವಾನಿಸಿದರು. ಔಷಧ ಮತ್ತು ವೈದ್ಯಕೀಯ ಸಾಧನಗಳ ವಲಯಗಳಲ್ಲಿ ಭಾರತದ ಬಲ ಮತ್ತು ಜೋರ್ಡಾನ್‌ನ ಭೌಗೋಳಿಕ ಅನುಕೂಲವು ಪರಸ್ಪರ ಪೂರಕವಾಗಿರಬಹುದು ಮತ್ತು ಈ ಕ್ಷೇತ್ರಗಳಲ್ಲಿ ಪಶ್ಚಿಮ ಏಷ್ಯಾ ಮತ್ತು ಆಫ್ರಿಕಾಕ್ಕೆ ಜೋರ್ಡಾನ್ ಅನ್ನು ವಿಶ್ವಾಸಾರ್ಹ ಕೇಂದ್ರವನ್ನಾಗಿ ಮಾಡಬಹುದು ಎಂದು ಅವರು ತಿಳಿಸಿದರು. ಭಯೋತ್ಪಾದನೆ, ಉಗ್ರವಾದ ಮತ್ತು ಮೂಲಭೂತೀಕರಣದ ವಿರುದ್ಧ ಜೋರ್ಡಾನ್‌ನ ದೃಢ ನಿಲುವನ್ನು ಶ್ಲಾಘಿಸಿದ ಪ್ರಧಾನಿ, ಭಯೋತ್ಪಾದನೆಯನ್ನು ಎದುರಿಸುವಲ್ಲಿ ಉಭಯ ರಾಷ್ಟ್ರಗಳು ಪರಸ್ಪರ ಸಹಮತ ಹೊಂದಿವೆ. ಪಶ್ಚಿಮ ಏಷ್ಯಾದಲ್ಲಿ ಶಾಂತಿ ಮತ್ತು ಸ್ಥಿರತೆಯ ಮಹತ್ವವನ್ನು ಒತ್ತಿಹೇಳುತ್ತಾ, ಪ್ರಾದೇಶಿಕ ಮತ್ತು ಜಾಗತಿಕ ಬೆಳವಣಿಗೆಗಳ ಕುರಿತು ನಾಯಕರು ಅಭಿಪ್ರಾಯಗಳನ್ನು ವಿನಿಮಯ ಮಾಡಿಕೊಂಡರು. ಈ ಪ್ರದೇಶದಲ್ಲಿ ಶಾಶ್ವತ ಶಾಂತಿಯನ್ನು ಸಾಧಿಸುವ ಪ್ರಯತ್ನಗಳಿಗೆ ಭಾರತದ ಬೆಂಬಲವನ್ನು ಪ್ರಧಾನಿ ಮೋದಿ ಪುನರುಚ್ಚರಿಸಿದರು. ಇದು ಪ್ರಧಾನಿ ಮೋದಿ ಅವರ ಜೋರ್ಡಾನ್‌ಗೆ ಮೊದಲ ಪೂರ್ಣ ದ್ವಿಪಕ್ಷೀಯ ಭೇಟಿಯಾಗಿದ್ದು, ಅವರು ತಮ್ಮ ಮೂರು ರಾಷ್ಟ್ರಗಳ ಪ್ರವಾಸದ ಎರಡನೇ ಹಂತದಲ್ಲಿ ಇಥಿಯೋಪಿಯಾದ ರಾಜಧಾನಿ ಅಡಿಸ್ ಅಬಾಬಾಗೆ ತೆರಳಿದ್ದಾರೆ.

***************

೨೦೪೭ರ ವೇಳೆಗೆ ವಿಕಸಿತ ಭಾರತದ ದೂರದೃಷ್ಟಿಯತ್ತ ಭಾರತ ಮುನ್ನಡೆಯುತ್ತಿರುವಾಗ ತಂತ್ರಜ್ಞಾನದ ಶಕ್ತಿ ಮತ್ತು ಮೌಲ್ಯಗಳ ಅಗತ್ಯ ಎಂದು ರಾಷ್ಟ್ರಪತಿ ದ್ರೌಪದಿ ಮುರ್ಮು ಹೇಳಿದ್ದಾರೆ. ಸುತ್ತೂರಿನ ಆದಿ ಜಗದ್ಗುರು ಶ್ರೀ ಶಿವರಾತ್ರಿ ಶಿವಯೋಗಿಗಳರವರ ಸಾವಿರದ ೬೬ನೇ ಜಯಂತಿ ಮಹೋತ್ಸವ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಆಧ್ಯಾತ್ಮಿಕ

ಸಂಸ್ಥೆಗಳು ಮಾನವೀಯತೆಯನ್ನು ಒಂದುಗೂಡಿಸುವ ಕಾರ್ಯ ನಿರ್ವಹಿಸುತ್ತಿದೆ ಎಂದು ತಿಳಿಸಿದ್ದಾರೆ. ಸುತ್ತೂರು ಮಠದಂತಹ ಸಂಸ್ಥೆಗಳು ಯುವ ಮನಸ್ಸುಗಳಿಗೆ ಸ್ಫೂರ್ತಿ ನೀಡುವ ಹಾಗೂ ಜವಾಬ್ದಾರಿಯುತ ನಾಗರಿಕರನ್ನು ರೂಪಿಸುವ ಕೆಲಸ ಮಾಡುತ್ತಿವೆ ಎಂದು ಅವರು ಅಭಿಪ್ರಾಯಪಟ್ಟಿದ್ದಾರೆ.

***************

ವಿಜಯ್ ದಿವಸ್ ಸಂದರ್ಭದಲ್ಲಿ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ರಾಷ್ಟ್ರಪತಿ ಭವನದಲ್ಲಿ ಪರಮ ವೀರ ದಿರ್ಘಾ ಗ್ಯಾಲರಿಯನ್ನು ಇಂದು ಉದ್ಘಾಟಿಸಿದರು. ಈ ಗ್ಯಾಲರಿಯಲ್ಲಿ ೨೧ ಪರಮ ವೀರ ಚಕ್ರ ಪ್ರಶಸ್ತಿ ಪುರಸ್ಕೃತರ ಭಾವಚಿತ್ರಗಳನ್ನು ಪ್ರದರ್ಶಿಸಲಾಗಿದೆ. ನಮ್ಮ ರಾಷ್ಟ್ರವನ್ನು ರಕ್ಷಿಸುವಲ್ಲಿ ಧೈರ್ಯಶಾಲಿ ಸಂಕಲ್ಪ ಮತ್ತು ಅಜೇಯ ಮನೋಭಾವವನ್ನು ಪ್ರದರ್ಶಿಸಿದ ನಮ್ಮ ರಾಷ್ಟ್ರೀಯ ವೀರರ ಬಗ್ಗೆ ಸಂದರ್ಶಕರಿಗೆ ತಿಳಿಸುವುದು ಇದರ ಉದ್ದೇಶವಾಗಿದೆ. ಮಾತೃಭೂಮಿಯ ಸೇವೆಯಲ್ಲಿ ತಮ್ಮ ಪ್ರಾಣವನ್ನೇ ಅರ್ಪಿಸಿದ ನಮ್ಮ ಧೈರ್ಯಶಾಲಿಗಳ ಸ್ಮರಣೆಯನ್ನು ಗೌರವಿಸುವ ಉಪಕ್ರಮವೂ ಇದಾಗಿದೆ. ರಕ್ಷಣಾ ಸಚಿವ ರಾಜನಾಥ್ ಸಿಂಗ್, ರಕ್ಷಣಾ ಸಿಬ್ಬಂದಿ ಮುಖ್ಯಸ್ಥ ಜನರಲ್ ಅನಿಲ್ ಚೌಹಾಣ್, ಸೇನಾ ಸಿಬ್ಬಂದಿ ಮುಖ್ಯಸ್ಥ ಜನರಲ್ ಉಪೇಂದ್ರ ದ್ವಿವೇದಿ, ವಾಯುಪಡೆ ಮುಖ್ಯಸ್ಥ ಏರ್ ಚೀಫ್ ಮಾರ್ಷಲ್ ಅಮರ್ ಪ್ರೀತ್ ಸಿಂಗ್, ನೌಕಾಪಡೆ ಮುಖ್ಯಸ್ಥ ಅಡ್ಮಿರಲ್ ದಿನೇಶ್ ಕೆ. ತ್ರಿಪಾಠಿ ಮತ್ತು ಇತರ ಗಣ್ಯರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

***************

ವಿಜಯ್ ದಿವಸ್ ಅಂಗವಾಗಿ ಇಂದು ವಾರ್ತಾ ಮತ್ತು ಪ್ರಸಾರ ಖಾತೆ ರಾಜ್ಯ ಸಚಿವ ಎಲ್. ಮುರುಗನ್ ಅವರು ಸೈನಿಕರಿಗೆ ಗೌರವ ಸಲ್ಲಿಸಿದರು. ೧೯೭೧ ರ ಭಾರತ-ಪಾಕ್ ಯುದ್ಧದಲ್ಲಿ ಭಾರತದ ಐತಿಹಾಸಿಕ ವಿಜಯಕ್ಕೆ ಕಾರಣವಾದ ದೇಶಕ್ಕಾಗಿ ದೇಶವು ತನ್ನ ಸೈನಿಕರ ಸ್ಥಿತಿಸ್ಥಾಪಕತ್ವ ಮತ್ತು ತ್ಯಾಗಕ್ಕಾಗಿ ಅವರನ್ನು ವಂದಿಸುತ್ತದೆ ಎಂದು ಡಾ. ಮುರುಗನ್ ಸಾಮಾಜಿಕ ಜಾಲತಾಣದಲ್ಲಿ ತಿಳಿಸಿದ್ದಾರೆ.

***************

ರಾಜ್ಯಸಭೆ ಇಂದು ಚುನಾವಣಾ ಸುಧಾರಣೆಗಳ ಕುರಿತು ಚರ್ಚೆಯನ್ನು ಪುನರಾರಂಭಿಸಿತು. ಚರ್ಚೆಯಲ್ಲಿ ಭಾಗವಹಿಸಿದ ಸದನದ ನಾಯಕ ಜೆ ಪಿ ನಡ್ಡಾ, "ಎಸ್‌ಐಆರ್ ಚುನಾವಣಾ ಆಯೋಗದ ಸಾಂವಿಧಾನಿಕ ಅಧಿಕಾರದೊಳಗೆ ಬರುವ ವಿಶೇಷ ತೀವ್ರ ಪರಿಷ್ಕರಣೆಯಾಗಿದೆ.

ಮತದಾರರ ಪಟ್ಟಿಯನ್ನು ನಿಯತಕಾಲಿಕವಾಗಿ ಶುದ್ಧೀಕರಿಸುವುದು ಮತ್ತು ಸರಿಪಡಿಸುವುದು ಆಯೋಗದ ಕರ್ತವ್ಯವಾಗಿದೆ". ಯಾವುದೇ ಅರ್ಹ ಮತದಾರರನ್ನು

ಪಟ್ಟಿಯಿಂದ ಹೊರಗಿಡಬಾರದು ಮತ್ತು ಯಾವುದೇ ಅನರ್ಹ ಮತದಾರರನ್ನು ಮತದಾರರ ಪಟ್ಟಿಯಲ್ಲಿ ಸೇರಿಸಬಾರದು ಎಂದು ಸಂವಿಧಾನವು ಆದೇಶಿಸುತ್ತದೆ ಎಂದು ನಡ್ಡಾ ಹೇಳಿದರು. ಭಾರತದ ಚುನಾವಣಾ ಆಯೋಗ ಮತ್ತು ಭಾರತದ ಸುಪ್ರೀಂ ಕೋರ್ಟ್‌ನಂತಹ ೬ ಸಾಂವಿಧಾನಿಕ ಸಂಸ್ಥೆಗಳು ದೇಶದ ಪ್ರಜಾಪ್ರಭುತ್ವದ ಆಧಾರಸ್ತಂಭಗಳಾಗಿವೆ ಎಂದು ಅವರು ಹೇಳಿದರು. ಈ ಸಂಸ್ಥೆಗಳು ಬಲಗೊಳ್ಳುತ್ತಿದ್ದಂತೆ, ಪ್ರಜಾಪ್ರಭುತ್ವದ ಬೇರುಗಳು ಗಟ್ಟಿಯಾಗುತ್ತದೆ ಎಂದು ಅವರು ತಿಳಿಸಿದರು.

ಎನ್‌ಸಿಪಿಯ ಪ್ರಫುಲ್ ಪಟೇಲ್, ಇವಿಎಂಗಳನ್ನು ಈ ಹಿಂದೆಯೂ ಚುನಾವಣೆಗಳಲ್ಲಿ ಬಳಸಲಾಗಿದೆ ಮತ್ತು ಅದನ್ನು ತಿರುಚಬಹುದು ಎಂಬುದಕ್ಕೆ ಯಾವುದೇ ಪುರಾವೆಗಳಿಲ್ಲ ಎಂದು ಹೇಳಿದರು. ಇವಿಎಂಗಳನ್ನು ಹೇಗೆ ತಿರುಚಬಹುದು ಎಂಬುದನ್ನು ಸಾಬೀತುಪಡಿಸಲು ಚುನಾವಣಾ ಆಯೋಗವು ಮುಕ್ತ ಸವಾಲನ್ನು ಯಾರು ಸ್ವೀಕರಿಸಲಿಲ್ಲ. ಮತದಾನದ ಹಕ್ಕು ಜನರ, ದೇಶದ ಮತ್ತು ಪ್ರಜಾಪ್ರಭುತ್ವದ ಶಕ್ತಿ ಎಂದು ಪಟೇಲ್ ಹೇಳಿದರು.

***************

ದೇಶಾದ್ಯಂತ ೧೭ ಲಕ್ಷ ಎಕರೆಗೂ ಹೆಚ್ಚು ರಕ್ಷಣಾ ಭೂಮಿಯನ್ನು ನಿರ್ವಹಿಸುವಲ್ಲಿ ನಿರ್ಣಾಯಕ ಪಾತ್ರ ವಹಿಸಿದ್ದಕ್ಕಾಗಿ ರಕ್ಷಣಾ ಸಚಿವ ರಾಜನಾಥ್ ಸಿಂಗ್ ಇಂದು ಡಿಫೆನ್ಸ್ ಎಸ್ಟೇಟ್ ಅನ್ನು ಶ್ಲಾಘಿಸಿದ್ದಾರೆ. ನವದೆಹಲಿಯಲ್ಲಿ ನಡೆದ ಡಿಫೆನ್ಸ್ ಎಸ್ಟೇಟ್ ದಿನಾಚರಣೆಯ ಸಂದರ್ಭದಲ್ಲಿ ಸಚಿವರು ಮಾತನಾಡಿ, ಈ ಜವಾಬ್ದಾರಿ ಸಾಮಾನ್ಯವಲ್ಲ, ಏಕೆಂದರೆ ರಕ್ಷಣಾ ಭೂಮಿ ಭಾರತದ ರಕ್ಷಣಾ ಕಾರ್ಯವಿಧಾನದ ಅಡಿಪಾಯವನ್ನು ರೂಪಿಸುತ್ತದೆ. ರಾಷ್ಟ್ರದ ಬಲವನ್ನು ಅದರ ಶಸ್ತ್ರಾಸ್ತ್ರಗಳಿಂದ ಮಾತ್ರ ಅಳೆಯಲಾಗುವುದಿಲ್ಲ, ಬದಲಾಗಿ ಅದರ ಪ್ರಾಮಾಣಿಕತೆ, ಪಾರದರ್ಶಕತೆ ಮತ್ತು ಆಡಳಿತದ ಮೌಲ್ಯಗಳಿಂದ ಅಳೆಯಲಾಗುತ್ತದೆ ಎಂದು ಸಿಂಗ್ ಹೇಳಿದರು. ಮುಂಬರುವ ವರ್ಷಗಳಲ್ಲಿ, ಕಂಟೋನ್ಮೆಂಟ್‌ಗಳನ್ನು ಇನ್ನಷ್ಟು ಸ್ಮಾರ್ಟ್, ಹಸಿರು ಮತ್ತು ಹೆಚ್ಚು ನಾಗರಿಕ ಸ್ನೇಹಿಯಾಗಿ ಮಾಡಲು ಸರ್ಕಾರ ಬದ್ಧವಾಗಿದೆ ಎಂದು ಅವರು ಹೇಳಿದರು. ಈ ಸಂದರ್ಭದಲ್ಲಿ, ದೇಶಾದ್ಯಂತ ಕಂಟೋನ್ಮೆಂಟ್ ಮಂಡಳಿಗಳಿಂದ ರಕ್ಷಣಾ ಭೂ ನಿರ್ವಹಣೆ ಮತ್ತು ಪುರಸಭೆಯ ಆಡಳಿತ ಕ್ಷೇತ್ರಗಳಲ್ಲಿನ ಅತ್ಯುತ್ತಮ ಸಾಧನೆಗಳನ್ನು ಗುರುತಿಸಿ, ೨೦೨೫ ರ ಸಾರ್ವಜನಿಕ ಸೇವೆಯಲ್ಲಿನ ಶ್ರೇಷ್ಠತೆಗಾಗಿ ರಕ್ಷಾ ಮಂತ್ರಿ ಪ್ರಶಸ್ತಿಗಳನ್ನು ಸಚಿವರು ಪ್ರದಾನ ಮಾಡಿದರು.

***************

ಲೋಕಸಭೆಯು ೨೦೨೫ ರ ರದ್ದತಿ ಮತ್ತು ತಿದ್ದುಪಡಿ ಮಸೂದೆಯನ್ನು ಪರಿಗಣನೆ ಮತ್ತು ಅಂಗೀಕಾರಕ್ಕಾಗಿ ಕೈಗೆತ್ತಿಕೊಂಡಿದೆ. ಕೆಲವು ಶಾಸನಗಳನ್ನು ರದ್ದತಿ ಮತ್ತು ಇತರ ಕೆಲವು

ಶಾಸನಗಳನ್ನು ತಿದ್ದುಪಡಿ ಮಾಡಲು ಈ ಮಸೂದೆಯು ಅವಕಾಶ ನೀಡುತ್ತದೆ. ಇದು ೧೮೮೬ ರ ಭಾರತೀಯ ಟ್ರಾಮ್‌ವೇಸ್ ಕಾಯ್ದೆ, ೧೯೭೬, ಲೆವಿ ಸಕ್ಕರೆ ಬೆಲೆ ಸಮೀಕರಣ ನಿಧಿ ಕಾಯ್ದೆ-೧೯೮೮ ಮತ್ತು ಭಾರತ್ ಪೆಟ್ರೋಲಿಯಂ ಕಾರ್ಪೊರೇಷನ್ ಲಿಮಿಟೆಡ್ - ನೌಕರರ ಸೇವಾ ಷರತ್ತುಗಳ ನಿರ್ಣಯ  ಕಾಯ್ದೆ-೧೯೮೮ ಸೇರಿದಂತೆ ೭೧ ಕಾಯ್ದೆಗಳನ್ನು ರದ್ದುಗೊಳಿಸುತ್ತದೆ. ಮಸೂದೆಯು ನಾಲ್ಕು ಕಾಯ್ದೆಗಳನ್ನು ತಿದ್ದುಪಡಿ ಮಾಡುತ್ತದೆ.

ಮಸೂದೆಯನ್ನು ಮಂಡಿಸಿದ ಕಾನೂನು ಮತ್ತು ನ್ಯಾಯ ಸಚಿವ ಅರ್ಜುನ್ ರಾಮ್ ಮೇಘವಾಲ್, ಶಾಸಕಾಂಗ ಇಲಾಖೆಯಿಂದ ಗುರುತಿಸಲ್ಪಟ್ಟ ಬಳಕೆಯಲ್ಲಿಲ್ಲದ ಕಾನೂನುಗಳನ್ನು ರದ್ದುಗೊಳಿಸಲು ಮಸೂದೆ ಪ್ರಯತ್ನಿಸುತ್ತದೆ ಎಂದು ಹೇಳಿದರು. ಒಂದು ಕಾನೂನು ತನ್ನ ಉಪಯುಕ್ತತೆ ಅಥವಾ ಪ್ರಸ್ತುತತೆಯನ್ನು ಕಳೆದುಕೊಂಡಾಗ, ಅದನ್ನು ರದ್ದುಗೊಳಿಸಲಾಗುತ್ತದೆ ಎಂದು ಅವರು ಹೇಳಿದರು.

***************

ದುಬೈನ ಸೆವೆನ್ಸ್ ಕ್ರೀಡಾಂಗಣದಲ್ಲಿ ಇಂದು ನಡೆದ ಅಂಡರ್-೧೯ ಏಷ್ಯಾ ಕಪ್ ೨೦೨೫ ರ ಮೂರನೇ ಗುಂಪು ಹಂತದ ಪಂದ್ಯದಲ್ಲಿ ಭಾರತ ತಂಡ ಮಲೇಷ್ಯಾವನ್ನು ೩೧೫ ರನ್‌ಗಳಿಂದ ಸೋಲಿಸಿತು.  ಭಾರತ ನೀಡಿದ್ದ ೪೦೯ ರನ್‌ಗಳ ಗುರಿಯನ್ನು ಬೆನ್ನಟ್ಟಿದ ಮಲೇಷ್ಯಾ ೩೨.೧ ಓವರ್‌ಗಳಲ್ಲಿ ೯೩ ರನ್‌ಗಳಿಗೆ ಆಲೌಟ್ ಆಯಿತು. ಭಾರತ ತಂಡವು ೫೦ ಓವರ್‌ಗಳಲ್ಲಿ ೭ ವಿಕೆಟ್‌ಗೆ ೪೦೮ ರನ್‌ಗಳೊಂದಿಗೆ ಇನ್ನಿಂಗ್ಸ್ ಅನ್ನು ಕೊನೆಗೊಳಿಸಿತು. ಭಾರತ ಪಿರ್ ಆಬಿಜ್ಞಾನ ಕುಂದು ಅಜೇಯ ದ್ವಿಶತಕ ಸಿಡಿಸಿದರು. ಇದಕ್ಕೂ ಮೊದಲು, ಮಲೇಷ್ಯಾ ಟಾಸ್ ಗೆದ್ದು ಬೌಲಿಂಗ್ ಆಯ್ಕೆ ಮಾಡಿಕೊಂಡಿತು.

***************

ಐಪಿಎಲ್ ೧೯ನೇ ಆವೃತ್ತಿ ವೇಳಾಪಟ್ಟಿಯನ್ನು ಬಿಸಿಸಿಐ ಬಿಡುಗಡೆಗೊಳಿಸಿದೆ. ೧೯ನೇ ಆವೃತ್ತಿಯು ಮಾರ್ಚ್ ೨೬ರಿಂದ ಮೇ ೩೧ರವರೆಗೆ ನಡೆಯಲಿದೆ.  ಅಬುದಾಬಿಯಲ್ಲಿ ಐಪಿಎಲ್ ಹರಾಜು ಪ್ರಕ್ರಿಯೆ ನಡೆಯುತ್ತಿದ್ದು, ವೆಂಕಟೇಶ್ ಅಯ್ಯರ್ ಅವರನ್ನು ಆರ್‌ಸಿಬಿ ೭ ಕೋಟಿ ರೂಪಾಯಿಗೆ ಖರೀದಿಸಿದೆ. ನ್ಯೂಜಿಲ್ಯಾಂಡ್ ವೇಗಿ ಜಾಕೋಬ್ ಡಫಿ ಆರ್‌ಸಿಬಿ ಪಾಲಾಗಿದ್ದಾರೆ. ಆಸ್ಟ್ರೇಲಿಯಾದ ಆಲ್‌ರೌಂಡರ್ ಕ್ಯಾಮರೂನ್ ಗ್ರೀನ್ ೨೫ ಕೋಟಿಗೆ ಕೆಕೆಆರ್‌ಗೆ ಬಿಕರಿಯಾಗಿದ್ದಾರೆ. ಶ್ರೀಲಂಕಾದ ವೇಗಿ ಮತೀಶಾ ಪತಿರಾಣಾ ಅವರನ್ನು ಕೊಲ್ಕೊತ್ತಾ ನೈಟ್ ರೈಡರ್ಸ್ ೧೮ ಕೋಟಿಗೆ ಖರೀದಿಸಿದೆ.

***************